# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಚಾಮರಾಜನಗರ.

**ಸ್ಪೆಷಲ್ ಕೇಸ್ ಸಂಖ್ಯೆ:** 42/2021

**ಚಾಸಾ**–2

**ಪ್ರಾಸಾ**–2

**ದಿನಾಂಕ 18.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಹೆಸರು** : ಲೋಕೇಶ್

**ತಂದೆಯ ಹೆಸರು** : ಸೋಮನಾಯ್ಕ

**ವಯಸ್ಸು** : 46 ವರ್ಷ

**ವೃತ್ತಿ** : ವ್ಯವಸಾಯ

**ವಾಸ ಸ್ಥಳ** : ಮೂಕನಪಾಳ್ಯ ಗ್ರಾಮ.

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ಈಗ್ಗೆ 3–4 ವರ್ಷಗಳ ಹಿಂದೆ ನಾನು ನಮ್ಮ ಊರಿನ ಬಸ್ ನಿಲ್ದಾಣದಲ್ಲಿ ಇರುವಾಗ ಪೊಲೀಸ್‌ರು ಒಂದು ದಾಖಲೆಗೆ ನನ್ನ ಸಹಿ ಪಡೆದಿದ್ದಾರೆ. ಆ ದಾಖಲೆಯಲ್ಲಿ ಏನು ಬರೆದಿದೆ ಗೊತ್ತಿಲ್ಲ . ಈಗ ತೋರಿಸಿದ ಫೋಟೋದಲ್ಲಿ ನಾನು ಇದ್ದು ಪೊಲೀಸ್‌ರು ಹೇಳಿದ ಮೇರೆಗೆ ಫೋಟೋಗೆ ನಿಂತಿದ್ದೇನೆ. ಈ ಬಗ್ಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ವೇಳೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೇಳಿದರು. ನಂತರ ಅನುಮತಿ ನೀಡಲಾಯಿತು.)**

**ಪಾಟೀ ಸವಾಲು – ಮಾನ್ಯ ಸರ್ಕಾರಿ ಅಭಿಯೋಜಕರಿಂದ :-**

ದಿಃ13.11.2018 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂಕನಪಾಳ್ಯ ಗ್ರಾಮದ ಆರೋಪಿ ರವರ ಜಮೀನಿನಲ್ಲಿ ಗಾಂಜಾ ಬೆಳೆದಿರುವ ಸಂಬಂಧ ಮಹಜರ್ ಮಾಡುವ ಸಲುವಾಗಿ ಮಾಹಿತಿ ನೀಡಿ ನನಗೆ ನಿಪಿ–4 ರಂತೆ ಪೊಲೀಸ್ ರು ನೋಟೀಸ್ ನೀಡಿ ಆರೋಪಿಯ ಜಮೀನಿನಲ್ಲಿ ಮಧ್ಯಾಹ್ಣ 3.00 ಗಂಟೆಯಿಂದ 4.00 ಗಂಟೆಯವರೆಗೆ ಮಹಜರ್ ಮಾಡಿ ಅಲ್ಲಿ ಅನಧೀಕೃತವಾಗಿ ಬೆಳೆದಿದ್ದ ಸುಮಾರು 9 ಕೆಜಿ ತೂಕದ 13 ಗಾಂಜಾ ಗಿಡಗಳನ್ನು ನನ್ನ ಮತ್ತು ಚಾಸಾ–3 ರವರ ಸಮಕ್ಷಮ ನಿಪಿ–1 ರ ಪ್ರಕಾರ ಮಹಜರ್ ಕ್ರಮ ಜರುಗಿಸಿದಾಗ ನಾನು ಸ್ಥಳದಲ್ಲಿದ್ದು ನಿಪಿ–1 ರ ಸಂಗತಿಗಳನ್ನು ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಹಜರ್ ಗೆ ಸಂಬಂಧಿಸಿದಂತೆ ನಿಪಿ–2 ರಂತೆ ಫೋಟೋ ತೆಗದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಪೂರ್ಣವಾಗಿ ಓದಿ ಹೇಳಿದಂತೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿ–15 ಎಂದು ಗುರುತಿಸಲಾಯಿತು.

ನಂತರ ಪುನಃ ಪೊಲೀಸ್‌ರು ಠಾಣೆಯಲ್ಲಿ ತೋರಿಸಿ ನನ್ನ ವಿಚಾರಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಮುಂದುವರಿದ ಹೇಳಿಕೆಯನ್ನು ನಿಪಿ–16 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – ಆರೋಪಿ ಪರ ವಕೀಲರಿಂದ –**

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**